FDP.26/2022

<u>ಮದ್ಯಂತರ ಅರ್ಜಿ ಸಂಖ್ಯೆ **-1** ರ ಮೇಲಿನ ಆದೇಶ</u>

ಅರ್ಜಿದಾರರ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ**-1** ನ್ನು ಕಲಂ **151** ರಡಿಯಲ್ಲಿ ಸಲ್ಲಿಸಿ**,** ಅದಕ್ಕೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು**,** ಸದರಿ ಪ್ರಮಾಣಪತ್ರದಲ್ಲಿ ತಾನು ಈ ದಾವೆಯಲ್ಲಿ **1** ನೇ ಅರ್ಜಿದಾರನಾಗಿದ್ದು**,** ಮುಖ್ಯ ಅರ್ಜಿಯನ್ನು ಅಸಲು ದಾವಾ ಸಂಖ್ಯೆ**.342/2021** ರ ಡಿಕ್ರಿಯಂತೆ ದಾವಾ ಶೆಡ್ಯೂಲ್ ಸ್ವತ್ತು ಐಟಂ ನಂಬರ್ **1** ರಿಂದ **4** ರಲ್ಲಿ ತನಗೆ ಮತ್ತು **1** ರಿಂದ **3** ಮತ್ತು **6** ನೇ ಪ್ರತಿವಾದಿಯರಿಗೆ ತಲಾ **1/7** ನೇ ಭಾಗದ ಹಿಸ್ಸೆಯನ್ನು ಹಾಗೂ **4** ಮತ್ತು **5** ನೇ ಪ್ರತಿವಾದಿಯರಿಗೆ ಒಟ್ಟಾಗಿ **1/7** ಭಾಗದ ಹಿಸ್ಸೆಯ ಹಕ್ಕಿರುತ್ತದೆ ಎಂದು ಆದೇಶಿಸಿದ್ದು**,** ಅದರಂತೆ ತಮಗೆ **1/7** ನೇ ಭಾಗದ ಹಿಸ್ಸೆಯನ್ನು ಕೋರಿ ಈ ಅಂತಿಮ ಡಿಕ್ರಿ ಅರ್ಜಿಯನ್ನು ಸಲ್ಲಿಸಿರುತ್ತೇವೆ**.** ಆದರೆ **1** ನೇ ಎದುರುದಾರರು ಈ ಅರ್ಜಿಯು ಬಾಕಿ ಇರುವಾಗಲೆ ಮರಣ ಹೊಂದಿರುತ್ತಾರೆ**. 1** ನೇ ಎದುರುದಾರರು ದಾವಾ ಶೆಡ್ಯೂಲ್ ಐಟಂ ನಂಬರ್ **1** ರಿಂದ **4** ರ ಆಸ್ತಿಗಳಲ್ಲಿ **1/7** ನೇ ಭಾಗದ ಹಿಸ್ಸೆಯ ಹಕ್ಕು ಇರುತ್ತದೆಂದು ಆದೇಶಿಸಿದ್ದು**,** ಆದರೆ **1** ನೇ ಎದುರುದಾರರು ಅವರ ಮರಣ ಪೂರ್ವದಲ್ಲಿ ದಾವಾ ಆಸ್ತಿಗಳಲ್ಲಿ ಬಂದಂತಹ ತನ್ನ ಹಿಸ್ಸೆಗೆ ಸಂಬಂಧಿಸಿದಂತೆ ಆಸ್ತಿಗಳನ್ನು ಯಾವ ರೀತಿ ವಿಲೇ ಆಗಬೇಕೆಂದು ತಿಳಿಸದೆ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಮರಣ ಶಾಸನಪತ್ರವನ್ನು ಮಾಡದೆ **1** ನೇ ಎದುರುದಾರರು ಮರಣ ಹೊಂದಿರುತ್ತಾರೆ**.** ಆದ್ದರಿಂದ ಅರ್ಜಿದಾರರುಗಳು ಮತ್ತು **2** ರಿಂದ **6** ನೇ ಎದುರುದಾರರುಗಳು **1** ನೇ ಎದುರುದಾರರಿಗೆ

ವಾರಸುರುದಾರಾಗಿದ್ದು, **1** ನೇ ಎದುರುದಾರರ ಹಿಸ್ಸೆಗೆ ಬಂದ ಸ್ವತ್ತುಗಳಿಗೆ ತಾವುಗಳು ಕಾನೂನುಬದ್ಧ ವಾರಸುದಾರರಾಗಿರುತ್ತೇವೆ. ಆದ್ದರಿಂದ **1** ನೇ ಎದುರುದಾರರ ಹಿಸ್ಸೆಗೆ ಬಂದ ಸ್ವತ್ತುಗಳಲ್ಲಿ ಅರ್ಜಿದಾರರುಗಳಿಗೆ ಮತ್ತು **2, 3** ಮತ್ತು **6** ನೇ ಎದುರುದಾರರಿಗೆ ಸಮನಾಗಿ ಹಿಸ್ಸೆ ಹಾಗೂ **4** ಮತ್ತು **5** ನೇ ಎದುರುದಾರರಿಗೆ ಒಟ್ಟಾಗಿ **1** ಹಿಸ್ಸೆ ಯ ಹಕ್ಕಿರುವುದರಿಂದ **1/7** ನೇ ಭಾಗದ ಹಿಸ್ಸೆಯ ಬದಲಾಗಿ **1/6** ನೇ ಭಾಗದ ಹಿಸ್ಸೆಗೆ ಅರ್ಹರಾಗಿರುತ್ತಾರೆಂದು ಆದೇಶಿಸುವುದು ಅವಶ್ಯಕವಾಗಿರುತ್ತದೆ ಎಂದು ಕೋರಿ ತನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ತಿಳಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ **-1** ಕ್ಕೆ ಎದುರುದಾರರ ಪರ ವಕೀಲರು ತಮ್ಮ ಪರ ಯಾವುದೇ ತಕರಾರು ಇರುವುದಿಲ್ಲವೆಂದು ಸದರಿ ಮಧ್ಯಂತರ ಅರ್ಜಿ ಸಂಖ್ಯೆ **-1** ನ್ನು ಪುರಸ್ಕರಿಸಬಹುದೆಂದು ತಿಳಿಸಿರುತ್ತಾರೆ.

ಉಭಯ ಪಕ್ಷಕಾರರ ಪರ ವಾದವನ್ನು ಆಲಿಸಿದ ನಂತರ ನ್ಯಾಯಾಲಯದ ಮುಂದಿರುವ ಎಲ್ಲಾ ದಾಲಾತಿಗಳನ್ನು ಪರಿಶೀಲಿಸಿ ನೋಡಲಾಯಿತು. ಅದರಂತೆ ಈ ಕೆಳಕಂಡಂತೆ

ಆದೇಶ

ಅರ್ಜಿದಾರರು ಸಲ್ಲಿರುವ ಮಧ್ಯಂತರ ಅರ್ಜಿ ಸಂಖ್ಯೆ**-1** ನ್ನು ಪುರಸ್ಕರಿಸಲಾಯಿತು.

ದಾವಾ ಐಟಂ ನಂಬರ್ **1** ರಿಂದ **4** ರ ಆಸ್ತಿಗಳಲ್ಲಿ **1** ಮತ್ತು **2** ನೇ ವಾದಿಯರಿಗೆ/ಅರ್ಜಿದಾರರಿಗೆ ಹಾಗೂ

**2, 3** ಮತ್ತು **6** ಪ್ರತಿವಾದಿಯರಿಗೆ**/**ಎದುರುರುದಾರರಿಗೆ ತಲಾ **1/6** ಭಾಗದ ಹಿಸ್ಸೆಯನ್ನು ಹಾಗೂ **4** ಮತ್ತು **5** ನೇ ಪ್ರತಿವಾದಿಯರಿಗೆ**/**ಎದುರುರುದಾರರಿಗೆ ಜಂಟಿಯಾಗಿ **1/6** ಭಾಗದ ಹಿಸ್ಸೆಯನ್ನು ಪಡೆಯಲು ಅರ್ಹರಾಗಿರುತ್ತಾರೆಂದು ಆದೇಶಿಸಲಾಗಿದೆ**.**

ಈ ಪ್ರಕಾರ ಅಸಲು ದಾವೆ ಸಂಖ್ಯೆ **342/2021** ರಲ್ಲಿ ಹೊಸದಾಗಿ ಪ್ರಾಥಮಿಕ ಡಿಕ್ರಿಯನ್ನು ಬರೆಯಲು ಕಛೇರಿಗೆ ಆದೇಶಿಸಲಾಗಿದೆ**.**

ಸಹಿ**/-**

**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ**.**ದ**.**ನ್ಯಾ**.**ದಂ**,** ಕಡೂರು**.**